ಪ್ರಸ್ತಾವ ಅಂಗೀಕಾರ

ಶ್ರೀ ಆರ್. ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಮಂತ್ರಿ) : ಮಾನ್ಯ ಅಧ್ಯಕ್ಷರೇ, '1997ನೇ ಸಾಲಿನ ಕರ್ನಾಟಕ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವಂತೆ ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ

'1997ನೇ ಸಾಲಿನ ಕರ್ನಾಟಕ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು'

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

ಅಧ್ಯಕ್ಷರು : ಮಾನ್ಯ ಕನ್ನಡ, ಸಂಸತಿ ಸಚಿವರು ಹೇಳಿಕೆಯನ್ನು ಓದಿಬಿಡಿರಿ. 'ಧರ್ಮಕಾರಣ' ಕಾದಂಬರಿ ವಿಚಾರದಲ್ಲಿ ಸರ್ಕಾರದ ಪರವಾಗಿ ಅವರು ಒಂದು ಹೇಳಿಕೆಯನ್ನು ಮಾಡುತ್ತಾರಂತೆ.

11) ಮಂತ್ರಿಗಳ ಹೇಳಿಕೆ

ವಿಷಯ : "ಧರ್ಮಕಾರಣ ಕೃತಿಯನ್ನು ಮುಟ್ಟುಗೋಲು ಹಾಕಿದ ಬಗ್ಗೆ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಪ್ರವಾಸೋದ್ಯಮ, ಕನ್ನಡ ಮತ್ತು ಸಂಸತಿ ರಾಜ್ಯ ಮಂತ್ರಿ) : ಸನ್ಮಾನ್ಯ ಅಧ್ಯಕ್ಷರೇ, ಈ ಹಿಂದೆ ನಿನ್ನೆ ದಿವಸ ಮೇಲ್ಮನೆಯಲ್ಲಿ ಧರ್ಮಕಾರಣ ಕೃತಿ ಬಗ್ಗೆ ಇವತ್ತು ಹೇಳಿಕೆ ಕೊಡಬೇಕೆಂದು ಹೇಳಿದ್ದರು. ಹಾಗೂ ಇವತ್ತು ಬೆಳಿಗ್ಗೆ ಇಲ್ಲಿ ಮಾನ್ಯ ಸದಸ್ಯರಾದಂಥ ಶ್ರೀ ಚಂದ್ರಕಾಂತ ಬೆಲ್ಲದ್ ಅವರು ಕೇಳಿದ ಪ್ರಕಾರ ಇವತ್ತು ಸಾಯಂಕಾಲ ನಾನು ಹೇಳಿಕೆ ಕೊಡುತ್ತೇನೆ ಎಂದು ಹೇಳಿದ್ದೆ. ಅದರ ಪ್ರಕಾರ ಸರ್ಕಾರದ ವತಿಯಿಂದ ಈಗಾಗಲೇ ಮೇಲ್ಮನೆಯಲ್ಲಿ ಹೇಳಿಕೆ ಕೊಟ್ಟಿದ್ದು ಈ ಮನೆಯಲ್ಲಿ ಅದನ್ನೇ ಪುನಃ ತಮ್ಮ ಮುಂದೆ ಹೇಳಿಕೆ ಕೊಡುವುದಕ್ಕೆ ಸಿದ್ಧವಾಗಿದ್ದೇನೆ.

'ಧರ್ಮಕಾರಣ'- ಡಾ॥ ಪಿ. ವಿ. ನಾರಾಯಣ್ ಅವರ ವಿವಾದಾತ್ಮಕ ಕಾದಂಬರಿ, ಅಲ್ಲಿಯ ಅವಹೇಳನಗಳನ್ನು, ಆ ಅಂಶಗಳನ್ನು ಪರಿಶೀಲಿಸಿ ಸೆಕ್ಷನ್ 95 ಸಿಆರ್‌ಪಿಸಿ ಅಡಿಯಲ್ಲಿ ಡಾ॥ ಪಿ. ವಿ. ನಾರಾಯಣ ಅವರ ವಿವಾದಾತ್ಮಕ ಕಾದಂಬರಿ 'ಧರ್ಮಕಾರಣ'ವನ್ನು ಮುಟ್ಟುಗೋಲು ಹಾಕಲು ಅಧಿಸೂಚನೆಯನ್ನು ಸರ್ಕಾರ ಹೊರಡಿಸುತ್ತದೆ.

ಅಧ್ಯಕ್ಷರು : ಆಯಿತು. ಇಷ್ಟೇ ಅಲ್ಲವೆ?

ಶ್ರೀ ಎ. ಟಿ. ರಾಮಸ್ವಾಮಿ : ಹಾಸನ ಬ್ಯಾಂಕಿನ ಬಗ್ಗೆ ಹೇಳಿಕೆ ಕೊಡುತ್ತೇನೆ ಎಂದು ಹೇಳಿದ್ದರು.

ಅಧ್ಯಕ್ಷರು : ನಾಳೆ ಕೊಡಿಸುತ್ತೇನೆ. ಮತ್ತೊಮ್ಮೆ ಎಲ್ಲಾ ಸದಸ್ಯರಲ್ಲಿ ಮತ್ತು ಪತ್ರಿಕಾ ಬಳಗದವರಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ನಾಳೆ ಬೆಳಿಗ್ಗೆ 9-30 ಗಂಟೆಗೆ ಮಾನ್ಯ ರಾಜ್ಯಪಾಲರು ನಮ್ಮ ಶಾಸಕರ ಭವನ ಆವರಣಕ್ಕೆ ದಯಮಾಡಿಸುತ್ತಿದ್ದಾರೆ. ಶಾಸಕರಿಗಾಗಿ ನಿರ್ಮಿಸಲಾಗಿರುವ 'ಹೆಲ್ತ್‌ಕ್ಲಬ್' ಪ್ರಾರಂಭೋತ್ಸವ ನಾಳೆ ಆಗುತ್ತದೆ. ಮುಖ್ಯಮಂತ್ರಿಗಳು ಅದರ ಅಧ್ಯಕ್ಷತೆ ವಹಿಸುತ್ತಾರೆ. ದಯಮಾಡಿ ಎಲ್ಲ ಸದಸ್ಯರೂ ಕೂಡ ಈಗ ಹೇಗೆ ನಿಮ್ಮ ಬಿಲ್ ಪಾಸ್ ಮಾಡುವುದಕ್ಕೆ ಬಂದಿದ್ದೀರಿ, ಅದೇ ರೀತಿ ನಾಳೆಕೂಡ ಇದ್ದು ನನ್ನ ಮರ್ಯಾದೆ ಉಳಿಸಬೇಕು. ಸನ್ಮಾನ್ಯ ರಾಜ್ಯಪಾಲರು ಬರುತ್ತಿದ್ದಾರೆ ಎಂದು ಹೇಳಿ ನಾನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಮಾನ್ಯ ರಾಜಣ್ಣನವರು ಈಗ ಅವರ ತೋಟದಲ್ಲಿ ಎಲ್ಲರಿಗೂ ಕೂಡ ಊಟದ ವ್ಯವಸ್ತೆ ಮಾಡಿರುವುದರಿಂದ ಎಲ್ಲಾ ಸದಸ್ಯರು ಅಲ್ಲಿಗೆ ಬರಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಈಗ ಸಭೆಯನ್ನು ಮುಂದೂಡುತ್ತಿದ್ದೇನೆ. ಮತ್ತೆ ಸದನವು ನಾಳೆ ಬೆಳ್ಳಿಗ್ಗೆ 11 ಗಂಟೆಗೆ ಸಮಾವೇಶಗೊಳ್ಳುವುದು.

(ಸದನವು ರಾತ್ರಿ 8ಗಂಟೆ 28ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 27ನೇ ಮಾರ್ಚ್ ಮಾಹೆ 1997ರ ಗುರುವಾರದಂದು ಬೆಳಿಗ್ಗೆ 11 ಗಂಟೆಗೆ ಸೇರಲು ನಿಶ್ಚಯಿಸಿತು)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)